**MONDAY 28.10.2024**

## ಕುಲಪತಿ ಡಾ.ಸುರೇಶ್ ಮಾಹಿತಿ | ರೈತರ ಗಮನ ಸೆಳೆಯಲಿವೆ ಹೊಸ ತಂತ್ರಜ್ಞಾನ

# ನ.14ರಿಂದ ಜಿಕೆವಿಕೆ ಆವರಣದಲ್ಲಿ ಕೃಷಿ ಮೇಳ

**ಬೆಂಗಳೂರು:** ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ನ.14ರಿಂದ 17ರವರೆಗೆ ಹವಾಮಾನ ಚತುರ ಡಿಜಿಟಲ್ ಕೃಷಿ ಎಂಬ ಘೋಷ ವಾಕ್ಯದೊಂದಿಗೆ ಕೃಷಿ ಮೇಳವನ್ನು ಜಿಕೆವಿಕೆ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಕೆವಿಕೆ ಕುಲಪತಿ ಡಾ. ಎಸ್.ವಿ. ಸುರೇಶ್ ತಿಳಿಸಿದರು.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೆನ್ಸಾರ್ ಆಧಾರಿತ ಡ್ರೋಣ್, ನಾನಾ ಬೆಳೆಗಳಿಗೆ ಟ್ರ್ಯಾಕ್ಟರ್‌ನಲ್ಲಿ ಔಷಧ ಸಿಂಪಡಿಸುವ ಸೆನ್ಸಾರ್ ಆಧಾರಿತ ಯಂತ್ರ ಸೇರಿದಂತೆ ಹೊಸ ತಂತ್ರಜ್ಞಾನಗಳು ಈ ಬಾರಿ ಕೃಷಿ ಮೇಳದಲ್ಲಿ ರೈತರ ಗಮನ ಸೆಳೆಯಲಿವೆ. ಸುಮಾರು ಒಂದು ಎಕರೆ ಜಾಗದಲ್ಲಿ ಈ ಬಾರಿ ಡಿಜಿಟಲ್ ಕೃಷಿ ಅನಾವರಣಗೊಳ್ಳಲಿದ್ದು, ಈ ಬಾರಿ ರೈತರೇ ಕೃಷಿ ಮೇಳದ ರಾಯಭಾರಿಗಳಾಗಿರುವರು. ಭೌತಿಕವಾಗಿ ಮೇಳಕ್ಕೆ ಬರಲಾಗದವರು ಆನ್‌ಲೈನ್ ಮೂಲಕವೂ ವೀಕ್ಷಿಸಬಹುದು. ಜತೆಗೆ ರೈತರು ತಮ್ಮ ಸಮಸ್ಯೆಗಳನ್ನು ಕೇಳಬಹುದು ಎಂದರು.




**ಜಾನುವಾರುಗಳ ಪ್ರದರ್ಶನಕ್ಕೆ ಒತ್ತು:** ಕೃಷಿ ಮೇಳದಲ್ಲಿ ಸಾವಯವ ಕೃಷಿ ಸಂಬಂಧಿಸಿದಂತೆ ಸ್ಥಳೀಯ ಜಾನುವಾರುಗಳ ಪ್ರದರ್ಶನಕ್ಕೆ ಒತ್ತು ನೀಡಲಾಗುತ್ತಿದ್ದು, ಕೋಳಿ, ಕುರಿ, ಮೇಕೆ ಇತ್ಯಾದಿಗಳನ್ನು ಪ್ರದರ್ಶಿಸಲಾಗುವುದು. ರಾಜ್ಯದ ನಾನಾ ಭಾಗಗಳಿಂದ ಮೇಳಕ್ಕೆ ರೈತರನ್ನು ಕರೆತರಲು ಹಲವು ಕೃಷಿ ಸಂಸ್ಥೆಗಳೊಂದಿಗೆ ಮಾತುಕತೆ ನಡೆಸಲಾಗಿದೆ. ಯಾವ ವಾತಾವರಣದಲ್ಲಿ ಯಾವ ಭೂಮಿಯಲ್ಲಿ ಯಾವ ಬೆಳೆ ಬೆಳೆಯಬೇಕು ಎಂಬುದರ ಬಗ್ಗೆ ರೈತರಿಗೆ ಅಗತ್ಯ ಮಾಹಿತಿ ನೀಡುವ ತಂತ್ರಜ್ಞಾನವೂ ಬರಲಿದೆ.

ಬೆಂಗಳೂರು ಕೃಷಿ ವಿವಿ ಕುಲಸಚಿವ ಡಾ. ಕೆ.ಸಿ. ನಾರಾಯಣಸ್ವಾಮಿ, ಸಂಶೋಧನಾ ನಿರ್ದೇಶಕ ಡಾ. ಎಚ್.ಎಸ್. ಶಿವರಾಮು, ವಿಸ್ತರಣಾ ನಿರ್ದೇಶಕ ಡಾ. ವಿ.ಎಲ್. ಮಧುಪ್ರಸಾದ್, ಡೀನ್ ಡಾ. ಮೋಹನ್ ಈಶ್ವರ್ ನಾಯ್ಕ, ತರಬೇತಿ ಸಂಯೋಜಕ ಡಾ. ಕೆ. ಶಿವರಾಮು ಸೇರಿದಂತೆ ಇತರರು ಉಪಸ್ಥಿತರಿದ್ದರು.

### 700 ಮಳಿಗೆಗಳಿಗೆ

ಕೃಷಿ ಮೇಳದಲ್ಲಿ 700 ಮಳಿಗೆಗಳನ್ನು ತೆರೆಯಲು ಅವಕಾಶ ನೀಡಲಾಗಿದ್ದು, ಅಲಂಕಾರಿಕ ಮೀನುಗಳು ವಿಶೇಷವಾಗಿರಲಿವೆ. ಸಿರಿಧಾನ್ಯ ಪೂರಕ ಆಹಾರಕ್ಕೆ ಸಂಬಂಧಿಸಿದಂತೆ ವಿಶೇಷ ಮಳಿಗೆ ತೆರೆಯಲಾಗುತ್ತದೆ.

### 146 ಮಂದಿಗೆ ಸನ್ಮಾನ

ಕೃಷಿಯಲ್ಲಿ ಸಾಧನೆ ಮಾಡಿದ ರೈತರನ್ನು ಇದೇ ವೇಳೆ ಗೌರವಿಸಲಾಗುತ್ತಿದ್ದು, ಇದಕ್ಕಾಗಿ ರಾಜ್ಯಮಟ್ಟದಲ್ಲಿ 6 ಜನ, ಜಿಲ್ಲಾ ಮಟ್ಟದಲ್ಲಿ 20 ಹಾಗೂ ತಾಲೂಕು ಮಟ್ಟದಲ್ಲಿ 120 ರೈತರಿಗೆ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ.

### ಹೊಸ ತಳಿಗಳ ಬಿಡುಗಡೆ

ಕಡಿಮೆ ಅವಧಿಯಲ್ಲಿ ಹೆಚ್ಚು ಇಳುವರಿ ಕೊಡುವ ಮುಸುಕಿನ ಜೋಳ ಸಂಕರಣ ತಳಿ, ಅಲಸಂದೆ ತಳಿ, ಸೂರ್ಯಕಾಂತಿ ಸಂಕರಣ ತಳಿ, ಬಾಜ್ರ ನೇಪಿಯರ್ ಸಂಕರಣ ತಳಿಗಳನ್ನು ಅಭಿವೃದ್ಧಿಪಡಿಸಲಾಗಿದೆ. ಕೃಷಿ ಮೇಳದಲ್ಲಿ ಇವುಗಳನ್ನು ಪರಿಚಯಿಸಲಾಗುತ್ತದೆ.

**Hosadigantha Pg.10**

**KannadaPrabha Pg.03**

# ಕೃಷಿ ಪರಿಸರದಲ್ಲಿ ವಿಶೇಷ ಚೇತನರೊಂದಿಗೆ ಒಂದು ದಿನ!

## ಕೃಷಿಯತ್ತ ಅಂಗವಿಕಲರನ್ನು ಸೆಳೆಯಬೇಕು: ಸುರೇಶ್ | ಕೃಷಿ ಕುರಿತು ಒಂದು ದಿನದ ಕಾರ್ಯಾಗಾರ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ವಿಶೇಷಚೇತನರಿಗೆ ಸಮಾನ ಹಕ್ಕು ಮತ್ತು ಅವಕಾಶಗಳನ್ನು ಕಲ್ಪಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಎಸ್.ವಿ.ಸುರೇಶ್ ಅಭಿಪ್ರಾಯಪಟ್ಟರು.

ಹೆಬ್ಬಾಳದ ಜಿಕೆವಿಕೆಯಲ್ಲಿ ಭಾನುವಾರ ಆಯೋಜಿಸಿದ್ದ ‘ಕೃಷಿ ಪರಿಸರದಲ್ಲಿ ವಿಶೇಷಚೇತನರೊಂದಿಗೆ ಒಂದುದಿನ’ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಅವಕಾಶ ವಂಚಿತ ವಿಶೇಷ ಚೇತನರನ್ನು ಮುಖ್ಯವಾಹಿನಿಗೆ ತರಲು ಅಲ್ಲಲ್ಲಿ ಪ್ರಯತ್ನಗಳು ನಡೆಯುತ್ತಿವೆ. ಇಂದಿನ ಯಾಂತ್ರೀಕೃತ ಜಗತ್ತಿನಲ್ಲಿ ಕೃಷಿ ಮತ್ತು ಪರಿಸರದತ್ತ ವಿಶೇಷಚೇತನರನ್ನು ಸೆಳೆಯುವುದು ಹೆಚ್ಚು ಸೂಕ್ತವಾಗಿದೆ ಎಂದು ಕರೆ ನೀಡಿದರು.

ನ.14 ರಿಂದ 17ರವರೆಗೂ ಜಿಕೆವಿಕೆಯಲ್ಲಿ ಕೃಷಿ ಮೇಳ ಆಯೋಜಿಸಿದ್ದು ಲಕ್ಷಾಂತರ ಜನರು ಆಗಮಿಸುವ ನಿರೀಕ್ಷೆ ಇದೆ. ಹೆಚ್ಚಿನ ಜನಸಂದಣಿ ಇರುವುದರಿಂದ ವಿಶೇಷಚೇತನರು ಭಾಗವಹಿಸಲು ಕಷ್ಟವಾಗುತ್ತದೆ. ಆದ್ದರಿಂದ ಇಲ್ಲಿನ ವೈವಿಧ್ಯಮಯ ಬೆಳೆ ಪದ್ಧತಿ, ಪರಿಸರ, ಉದ್ಯಾನವನ ವೀಕ್ಷಿಸಲು ಅನುವು ಮಾಡಿಕೊಡಲು ಇದೊಂದು ವಿಶೇಷ ಪ್ರಯತ್ನವಾಗಿದೆ ಎಂದು ಬಣ್ಣಿಸಿದರು.



‘ಕೃಷಿ ಪರಿಸರದಲ್ಲಿ ವಿಶೇಷಚೇತನರೊಂದಿಗೆ ಒಂದು ದಿನ’ ಕಾರ್ಯಕ್ರಮವನ್ನು ಡಾ. ಎಸ್.ವಿ.ಸುರೇಶ್ ಉದ್ಘಾಟಿಸಿದರು.

ಇದೇ ವೇಳೆ ವಿಶೇಷಚೇತನರಿಗಾಗಿಯೇ ಹಲವು ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಲಿಟಿ, ಕಲ್ಪವೃಕ್ಷ, ವಾಯ್ಸ್ ಆಫ್ ನೀಡಿ ಫೌಂಡೇಷನ್, ಬೆಳಕು ಮತ್ತಿತರ ಸಂಸ್ಥೆಗಳ 230ಕ್ಕೂ ಅಧಿಕ ಮಕ್ಕಳು ಭಾಗವಹಿಸಿದ್ದರು. ಸಂಶೋಧನಾ ನಿರ್ದೇಶಕ ಡಾ.ಎಚ್.ಎಸ್.ಶಿವರಾಮು, ವಿಸ್ತರಣಾ ನಿರ್ದೇಶಕ ಮಧುಪ್ರಸಾದ್ ಹಾಜರಿದ್ದರು.

# ಕೃಷಿ ಮೇಳ ವೀಕ್ಷಿಸಿದ ವಿಶೇಷಚೇತನರು

**ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದಲ್ಲಿ ವಿಶೇಷಚೇತನರಿಗಾಗಿ ಭಾನುವಾರ ಕೃಷಿ ಮೇಳ ಆಯೋಜಿಸಲಾಗಿತ್ತು. ನಗರದ ನಾನಾ ಭಾಗಗಳಿಂದ ಬೆಳಗ್ಗೆಯೇ ಆಗಮಿಸಿದ ವಿಶೇಷಚೇತನರು, ಸಂತಸದಿಂದ ಬೆಂಗಳೂರು ಕೃಷಿ ವಿವಿ ಆವರಣದಲ್ಲಿನ ಸುಂದರ ಪರಿಸರ ಆಸ್ವಾದಿಸಿದರು.

ಕೃಷಿ ಮೇಳಕ್ಕಾಗಿ ಬೆಳೆಸಿರುವ ಅವರೆಕಾಯಿ, ಅಲಸಂದೆ, ರಾಗಿ, ಜೋಳ, ತೊಗರಿ, ಹುರುಳಿ, ಸೂರ್ಯಕಾಂತಿ ಮತ್ತಿತರ ಬೆಳೆಗಳ ತಾಕುಗಳನ್ನು ವೀಕ್ಷಿಸಿದರು. ನಡೆದಾಡಲು ಸಾಧ್ಯವಾಗದವರು ವೀಲ್ ಚೇರ್‌ಗಳಲ್ಲೇ ಸುತ್ತಾಡಿ, ಕೃಷಿ ಬೆಳೆಗಳ ಬಗ್ಗೆ ಮಾಹಿತಿ ಪಡೆದರು. ಬೆಂಗಳೂರು ಕೃಷಿ ವಿವಿಯ ಅಧಿಕಾರಿಗಳು ಇವರಿಗೆ ನೆರವಾದರು.

ನ.14ರಿಂದ ನಾಲ್ಕು ದಿನ ಕೃಷಿ ಮೇಳ ನಡೆಯಲಿದ್ದು, ಲಕ್ಷಾಂತರ ಮಂದಿ ಆಗಮಿಸಲಿದ್ದಾರೆ. ಜನಸಂದಣಿಯಲ್ಲಿ ವಿಶೇಷಚೇತನರಿಗೆ ಮೇಳ ವೀಕ್ಷಣೆ ಮಾಡುವುದು ಕಷ್ಟ. ಹೀಗಾಗಿ, ಇವರಿಗಾಗಿ ಪ್ರತ್ಯೇಕವಾಗಿ ಒಂದು ದಿನದ ಮೇಳ ಆಯೋಜಿಸಲಾಗಿತ್ತು.

ಸಸಿಗೆ ನೀರೆರೆಯುವ ಮೂಲಕ ವಿವಿ ಕುಲಪತಿ ಡಾ ಎಸ್.ವಿ. ಸುರೇಶ ಕಾರ್ಯಕ್ರಮ ಉದ್ಘಾಟಿಸಿದರು. ಈ ವೇಳೆ ಮಾತನಾಡಿದ ಅವರು, ''ಕೃಷಿ ಸಂಶೋಧನೆ, ಬೋಧನೆ ಹಾಗೂ ವಿಸ್ತರಣೆಯ ಮೂಲಕ ರೈತರನ್ನು ಆರ್ಥಿಕವಾಗಿ ಸದೃಢರನ್ನಾಗಿಸುವುದು ವಿವಿಯ ಧ್ಯೇಯ. ಅದೇ ರೀತಿ ವಿಶೇಷಚೇತನರೂ ಈ ಸಮಾಜದ ಒಂದು ಅವಿಭಾಜ್ಯ ಅಂಗವಾಗಿದ್ದು, ಅವರಿಗೂ ಸಮಾನ ಹಕ್ಕು ಮತ್ತು ಅವಕಾಶಗಳನ್ನು ಕಲ್ಪಿಸುವುದು ನಮ್ಮೆಲ್ಲರ ಜವಾಬ್ದಾರಿ,'' ಎಂದರು.



ಜಿಕೆವಿಕೆ ಆವರಣದಲ್ಲಿ ವಿಶೇಷಚೇತನರು ಒಂದು ದಿನದ ಕೃಷಿ ಮೇಳ ವೀಕ್ಷಿಸಿದರು

ಇದೇ ಸಂದರ್ಭದಲ್ಲಿ ವಿಶೇಷಚೇತನರಿಗಾಗಿಯೇ ಪರಿಸರ ವೀಕ್ಷಣೆಯ ಜತೆ ವಿಶೇಷ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ದಿ ಅಸೋಸಿಯೆಷನ್ ಆಫ್ ಪೀಪಲ್ ವಿತ್ ಡಿಸೆಬಲಿಟಿ, ವಾಯ್ಸ್ ಆಫ್ ನೀಡಿ ಫೌಂಡೇಶನ್, ಕಲ್ಪವೃಕ್ಷ, ಬೆಳಕು ಹಾಗೂ ಇತರೆ ಸಂಸ್ಥೆಗಳ 230ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದರು.

ವಿವಿಯ ಸಂಶೋಧನಾ ನಿರ್ದೇಶಕ ಡಾ. ಎಚ್.ಎಸ್. ಶಿವರಾಮು, ವಿಸ್ತರಣಾ ನಿರ್ದೇಶಕ ಡಾ.ವಿ.ಎಲ್. ಮಧುಪ್ರಸಾದ್, ಡೀನ್ ಡಾ.ಎನ್.ಬಿ. ಪ್ರಕಾಶ್, ಡಾ. ಮೋಹನ್ ಈಶ್ವರ್ ನಾಯ್ಕ ಉಪಸ್ಥಿತರಿದ್ದರು.

Vijaya Karnataka Pg.10

# ಅಂಗವಿಕಲ ಮಕ್ಕಳಿಗೆ ಕೃಷಿ ಪಾಠ

## ಜಿಕೆವಿಕೆಯಲ್ಲಿ ಬೆಳೆಗಳ ಮಾಹಿತಿ ವಿನಿಮಯ | 200ಕ್ಕೂ ಹೆಚ್ಚು ಮಕ್ಕಳು ಭಾಗಿ

**ವಿಜಯವಾಣಿ ಸುದ್ದಿಜಾಲ** ಬೆಂಗಳೂರು

ನಗರದ ಶಾಲೆಗಳಲ್ಲಿ ದಿನವಿಡೀ ನಾಲ್ಕು ಗೋಡೆಗಳ ಮಧ್ಯೆ ಪಠ್ಯ ಕಲಿಯುವ ಅಂಗವಿಕಲ ಮಕ್ಕಳು ಭಾನುವಾರ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಹಸಿರು ಪರಿಸರದಲ್ಲಿ ಕೃಷಿಯ ಕುರಿತು ಮಾಹಿತಿ ಪಡೆದು ಖುಷಿಪಟ್ಟರು. ವೈವಿಧ್ಯಮಯ ಬೆಳೆಗಳಿದ್ದ ತಾಕುಗಳಲ್ಲಿ ಪೂರಕ ಮಾಹಿತಿ ಪಡೆದರು.

ಬೆಂಗಳೂರು ಕೃಷಿ ವಿವಿ ಪ್ರತಿ ವರ್ಷ ನಡೆಸುವ ಕೃಷಿ ಮೇಳದ ಜನಜಂಗುಳಿ ಮಧ್ಯೆ ಅಂಗವಿಕಲರು ವೀಕ್ಷಿಸಲು ಕಷ್ಟಪಡಬೇಕಿದೆ.

» **ಬೆಂಗಳೂರು ಕೃಷಿ ವಿವಿ ಆಯೋಜನೆ**

ಈ ಸಮಸ್ಯೆಗೆ ಪರಿಹಾರವಾಗಿ ಸಣ್ಣ ಪ್ರಯತ್ನವನ್ನು ವಿವಿ ಕೈಗೊಂಡಿದ್ದು, ಅಂಗವಿಕಲ ಮಕ್ಕಳಿಗಾಗಿಯೇ 'ಕೃಷಿ ಪರಿಸರದಲ್ಲಿ ಒಂದು ದಿನ' ಕಾರ್ಯಕ್ರಮ ರೂಪಿಸಿತ್ತು.

ಹಸಿರ ಮಧ್ಯೆ ಬೆಳಗ್ಗೆಯಿಂದ ಮಧ್ಯಾಹ್ನದವರೆಗೂ ಮಕ್ಕಳು ಕೃಷಿ ಸಂಬಂಧಿತ ಚಟುವಟಿಕೆಗಳ ಬಗ್ಗೆ ಕುತೂಹಲಕಾರಿ ಪ್ರಶ್ನೆಗಳನ್ನು ಕೇಳಿ ಉತ್ತರ ಕಂಡುಕೊಂಡರು. ಇವರಿಗೆ ಕೃಷಿ ವಿಜ್ಞಾನಿಗಳು ಹಾಗೂ ಮಾರ್ಗದರ್ಶಕರು ನೆರವಾದರು. ತಾಕುಗಳಿಗೆ ಕರೆದೊಯ್ದು ಅಲ್ಲಿ ಬೆಳೆಸಿರುವ ವಿವಿಧ ತಳಿಯ ಬೆಳೆಗಳ ಬೆಳವಣಿಗೆ ಹೇಗಾಗುತ್ತದೆ, ಅದಕ್ಕೆ ನೀರು-ಗೊಬ್ಬರ ಹಾಕುವುದರಿಂದ ಯಾವ ಋತುವಿನಲ್ಲಿ ಅಧಿಕ ಇಳುವರಿ ಸಿಗುತ್ತದೆ ಎಂಬ ಮಾಹಿತಿಯನ್ನು ಮಕ್ಕಳಿಗೆ ನೀಡಲಾಯಿತು. ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಲಿಟಿ, ವಾಯ್ಸ್ ಆಫ್ ನೀಡಿ ಫೌಂಡೇಷನ್ ಸಹಯೋಗದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ 200ಕ್ಕೂ ಹೆಚ್ಚು ಅಂಗವಿಕಲ ಮಕ್ಕಳು ಪಾಲ್ಗೊಂಡಿದ್ದರು.

ಸಂಶೋಧನಾ ನಿರ್ದೇಶಕ ಡಾ. ಎಚ್.ಎಸ್. ಶಿವರಾಮು, ವಿಸ್ತರಣಾ ನಿರ್ದೇಶಕ ಡಾ. ವಿ.ಎಲ್. ಮಧುಪ್ರಸಾದ್, ಡಾ. ಟಿ.ಕೆ. ಪ್ರಭಾಕರ ಶೆಟ್ಟಿ, ಡಾ. ಎಂ. ಚಂದ್ರೇಗೌಡ ಮತ್ತಿತರರಿದ್ದರು.

> ವಾರ್ಷಿಕ ಕೃಷಿಮೇಳದಲ್ಲಿ ಅಂಗವಿಕಲರು ಸುಲಭವಾಗಿ ಪಾಲ್ಗೊಳ್ಳಲು ಸಾಧ್ಯವಾಗುತ್ತಿಲ್ಲ ಎಂಬ ಮಾತುಗಳನ್ನು ಹೇಳಿದ್ದರು. ಈ ನಿಟ್ಟಿನಲ್ಲಿ ಪ್ರಥಮ ಬಾರಿಗೆ ಪ್ರಯೋತಾತ್ಮಕವಾಗಿ ಅಂಗವಿಕಲ ಮಕ್ಕಳನ್ನು ಪ್ರತ್ಯೇಕವಾಗಿ ವಿವಿ ಕ್ಯಾಂಪಸ್‌ಗೆ ಆಹ್ವಾನಿಸಿ ಕೃಷಿ ಕುರಿತು ಮಾಹಿತಿ ಒದಗಿಸಲಾಯಿತು. ಇದರ ಸಾಧಕ-ಬಾಧಕ ಗಮನಿಸಿ ಭವಿಷ್ಯದಲ್ಲಿ ಇನ್ನಷ್ಟು ಕಾರ್ಯಕ್ರಮ ರೂಪಿಸಲಾಗುವುದು.
>
> | **ಡಾ. ಎಸ್.ವಿ. ಸುರೇಶ್**
> ಬೆಂಗಳೂರು ಕೃಷಿ ವಿವಿ ಕುಲಪತಿ



ಜಿಕೆವಿಕೆಯಲ್ಲಿ 'ಕೃಷಿ ಪರಿಸರದಲ್ಲಿ ಅಂಗವಿಕಲರೊಂದಿಗೆ ಒಂದು ದಿನ' ಕಾರ್ಯಕ್ರಮದ ನಿಮಿತ್ತ ಭಾನುವಾರ ಶಾಲಾ ಮಕ್ಕಳು ಕೃಷಿ ಬೆಳೆಗಳ ಬಗ್ಗೆ ಮಾಹಿತಿ ಪಡೆದರು.

# ರಾಧಾಕೃಷ್ಣಗೆ ಅತ್ಯುತ್ತಮ ರೈತ ಪ್ರಶಸ್ತಿ

**ಬೆಂಗಳೂರು:** ಬೆಂಗಳೂರು ಕೃಷಿ ವಿಶ್ವ ವಿದ್ಯಾಲಯವು 2024ರ ಕೃಷಿ ಮೇಳ ಹಿನ್ನೆಲೆಯಲ್ಲಿ ರಾಜ್ಯ, ಜಿಲ್ಲೆ ಹಾಗೂ ತಾಲೂಕು ಮಟ್ಟದ ಪ್ರಶಸ್ತಿ ಪ್ರಕಟಿಸಿದೆ. ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ರಾಜ್ಯಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿಗೆ ಚಿಂತಾಮಣಿ ತಾಲೂಕಿನ ಸಿ.ಆರ್. ರಾಧಾಕೃಷ್ಣ ಭಾಜನರಾಗಿದ್ದಾರೆ. ಜಿಲ್ಲಾ ಮಟ್ಟದಲ್ಲಿ ನೀಡುವ ಪ್ರಗತಿಪರ ರೈತ ಹಾಗೂ ರೈತ ಮಹಿಳೆ ಪ್ರಶಸ್ತಿಗೆ ಬೆಂಗಳೂರು ನಗರ, ಬೆಂ. ಗ್ರಾಮಾಂತರ, ರಾಮನಗರ, ತುಮಕೂರು, ಮಂಡ್ಯ, ಮೈಸೂರು, ಚಾಮರಾಜನಗರ, ಹಾಸನ, ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಿಂದ ಎರಡೂ ವರ್ಗದಿಂದ ತಲಾ ಒಬ್ಬರನ್ನು ಆಯ್ಕೆ ಮಾಡಲಾಗಿದೆ.

» **ಕೃಷಿ ಮೇಳದಲ್ಲಿ ಪ್ರದಾನ**

ನ.14ರಿಂದ ಜಿಕೆವಿಕೆಯಲ್ಲಿ ಆಯೋಜಿರುವ ಕೃಷಿಮೇಳದಲ್ಲಿ ಸಾಧಕರಿಗೆ ಪ್ರಶಸ್ತಿ ವಿತರಿಸಲಾಗುತ್ತದೆ.

**ಪ್ರಶಸ್ತಿಗಳ ವಿವರ**

ಎಚ್.ಡಿ. ದೇವೇಗೌಡ ರಾಜ್ಯಮಟ್ಟದ ರೈತ ಪ್ರಶಸ್ತಿ- ಸಿ.ಆರ್. ರಾಧಾಕೃಷ್ಣ (ಚಿಂತಾಮಣಿ ತಾಲೂಕು); ಡಾ. ಎಂ.ಎಚ್. ಮರೀಗೌಡ ರಾಜ್ಯಮಟ್ಟದ ತೋಟಗಾರಿಕೆ ರೈತ ಪ್ರಶಸ್ತಿ- ಎಚ್.ಸಿ. ರೂಪಾ, ಹಾಡೋನಹಳ್ಳಿ (ದೊಡ್ಡಬಳ್ಳಾಪುರ ತಾಲೂಕು); ಕ್ಯಾನ್ ಬ್ಯಾಂಕ್ ರಾಜ್ಯಮಟ್ಟದ ಅತ್ಯುತ್ತಮ ರೈತ- ವಿ.ಎಸ್. ಪ್ರವೀಣ್, ವಗರಹಳ್ಳಿ (ಚನ್ನರಾಯಪಟ್ಟಣ ತಾ.); ಕ್ಯಾನ್ ಬ್ಯಾಂಕ್ ರಾಜ್ಯಮಟ್ಟದ ಅತ್ಯುತ್ತಮ ರೈತ ಮಹಿಳೆ- ವೈ.ಸಿ. ಶಾಂತಮ್ಮ, ಕಗ್ಗಲಹಳ್ಳಿ (ರಾಮನಗರ ತಾ.); ಡಾ. ಆರ್. ದ್ವಾರಕೀನಾಥ್ ಅತ್ಯುತ್ತಮ ರೈತ- ಯು.ಎಂ. ನಾಗವರ್ಮ, ಉಣ್ಣೇನಹಳ್ಳಿ (ಹೊಳೆನರಸೀಪುರ ತಾ.); ಡಾ. ಆರ್. ದ್ವಾರಕೀನಾಥ್ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತೆ- ಡಾ. ಎಂ. ಶಾಲಿನಿ, ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ಜಿಕೆವಿಕೆ.

Vijayavani Pg.4c

Vijaya Karnataka
Pg.04

ಕೃಷಿ ಕ್ಷೇತ್ರದಲ್ಲೂ ಎಐ ತಂತ್ರಜ್ಞಾನ ಅಳವಡಿಕೆಗೆ ಜಿಕೆವಿಕೆ ಯತ್ನ

# ಪಕ್ಷಿಗಳ ಹಾವಳಿ ತಡೆಗೆ ಬರ್ಡ್ ಸ್ಕೇರರ್

■ **ಎಚ್.ಪಿ. ಪುಣ್ಯವತಿ** ಬೆಂಗಳೂರು
punyavathi.hp@timesofindia.com

ಸೂರ್ಯಕಾಂತಿ, ಮೆಕ್ಕೆಜೋಳದಂತಹ ನಾನಾ ಬೆಳೆಗಳಿಗೆ ಪಕ್ಷಿಗಳ ಹಾವಳಿ ಹೆಚ್ಚಾಗಿರುತ್ತದೆ. ಇಂತಹ ಪಕ್ಷಿಗಳ ಹಾವಳಿ ತಡೆಯಲು ಬೆಂಗಳೂರು ಕೃಷಿ ವಿವಿಯು 'ಸೌರ ಚಾಲಿತ ಬರ್ಡ್ ಸ್ಕೇರರ್' ಅಭಿವೃದ್ಧಿಪಡಿಸಿದೆ. ಜತೆಗೆ, ಸ್ವಯಂಚಾಲಿತ ಬೂಮ್ ಸ್ಪ್ರೇಯರ್, ಸ್ಮಾರ್ಟ್ ಉಳುಮೆ, ಬಿತ್ತನೆ ಬೀಜಗಳ ನಾಟಿಗಾಗಿ ಯಂತ್ರಗಳನ್ನೂ ಅಭಿವೃದ್ಧಿಪಡಿಸಿದೆ.

ಬರ್ಡ್ ಸ್ಕೇರರ್ ಉಪಕರಣವು ಪ್ರತಿ 15 ನಿಮಿಷದ ಅಂತರದಲ್ಲಿ ಮೂರು ವಿಭಿನ್ನ ರೀತಿಯ ಅಂದರೆ ಪ್ಲೇಟ್ ಶಬ್ದ, ಸೈರನ್ ಶಬ್ದ ಮತ್ತು ರೆಕಾರ್ಡ್ ಮಾಡಲಾದ ಮಾನವ ಧ್ವನಿಯಂತಹ ಶಬ್ದಗಳನ್ನು ಹೊರಸೂಸುತ್ತದೆ. ಇದರಿಂದ ಪಕ್ಷಿಗಳು ಕೂರಲು ಬರುತ್ತಿದ್ದರೆ ಅಥವಾ ಈಗಾಗಲೇ ಕೂತಿದ್ದರೆ ಅವುಗಳನ್ನು ಎಚ್ಚರಿಸಿ ಓಡಿಸಲು ಈ ಯಂತ್ರ ಸಹಕಾರಿಯಾಗಲಿದೆ. ಈ ಉಪಕರಣವು ಸೌರ ಶಕ್ತಿಯಿಂದ ಚಾಲಿತವಾಗಿದ್ದು, ಚಾರ್ಜ್ ನಿಯಂತ್ರಕ ಮತ್ತು ಬ್ಯಾಟರಿ ಹೊಂದಿರುತ್ತದೆ. ಇದು ಈ ಬಾರಿಯ ಕೃಷಿ ಮೇಳದಲ್ಲಿ ರೈತರ ಗಮನಸೆಳೆಯಲಿದೆ.

ರಾಜ್ಯದಲ್ಲಿ ಮೊದಲ ಬಾರಿಗೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಕೃತಕ ಬುದ್ಧಿಮತ್ತೆಯ 'ಸ್ಮಾರ್ಟ್ ಆ್ಯಪ್ ತಂತ್ರಜ್ಞಾನ'ದ ಮೂಲಕ ರೈತರ ಸಮಸ್ಯೆಗಳನ್ನು ಬಗೆಹರಿಸಲು ಇದೇ ರೀತಿ ನಾನಾ ಯಂತ್ರಗಳು, ತಂತ್ರಜ್ಞಾನಗಳು, ಹೊಸ ಹೊಸ ಆ್ಯಪ್‌ಗಳನ್ನು ಅಭಿವೃದ್ಧಿಪಡಿಸಿದೆ. ಪ್ರಸ್ತುತ ನಾನಾ ಕ್ಷೇತ್ರದಲ್ಲಿ ಎಐ ತಂತ್ರಜ್ಞಾನ ಅಳವಡಿಸಿಕೊಂಡಿದ್ದು, ಕೃಷಿ ಕ್ಷೇತ್ರದಲ್ಲಿಯೂ ಹಂತ- ಹಂತವಾಗಿ ಎಐ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲಾಗುತ್ತಿದೆ. ಇಂತಹ ವಿನೂತನ ಪ್ರಯತ್ನಕ್ಕೆ ಜಿಕೆವಿಕೆ ಮುಂದಾಗಿದೆ. ಕೂಲಿಕಾರ್ಮಿಕರ ಕೊರತೆ, ಸಾಂಪ್ರದಾಯಿಕ ಕೃಷಿ ಸೇರಿದಂತೆ ನಾನಾ ಕಾರಣಗಳಿಂದ ಕೃಷಿಯಿಂದ ದೂರ ಉಳಿದಿರುವವರನ್ನು ಕೃಷಿಯತ್ತ ಸೆಳೆಯುವ ಪ್ರಯತ್ನಕ್ಕೆ ಮುಂದಾಗಿದೆ.



ಸೌರ ಚಾಲಿತ ಬರ್ಡ್ ಸ್ಕೇರರ್.

■ ಬೂಮ್ ಸ್ಪ್ರೇಯರ್, ಸ್ಮಾರ್ಟ್ ಉಳುಮೆ, ಬಿತ್ತನೆ ಬೀಜಗಳ ನಾಟಿಗಾಗಿ ಯಂತ್ರಗಳ ಅಭಿವೃದ್ಧಿ

ಜಮೀನಿನ ಮಣ್ಣಿನ ಫಲವತ್ತತೆ, ಆರೋಗ್ಯ, ಪೌಷ್ಟಿಕಾಂಶಗಳ ಪ್ರಮಾಣದ ನಿಖರ ಮಾಹಿತಿ, ಎಷ್ಟು ಪ್ರಮಾಣದಲ್ಲಿ ರಸಗೊಬ್ಬರ ಹಾಕಬೇಕು ಎನ್ನುವ ತಿಳಿವಳಿಕೆ, ಯಾವ ಪ್ರದೇಶದಲ್ಲಿ ಯಾವ ಬೆಳೆ ಬೆಳೆಸಬೇಕು, ಮಾರುಕಟ್ಟೆ ಹೇಗಿದೆ ಎನ್ನುವ ವಿವರಗಳನ್ನು ಹಾಗೂ ಕೃಷಿ ಉತ್ಪನ್ನಗಳ ಮಾರಾಟ, ಸಂಗ್ರಹಣೆ ಸೇರಿದಂತೆ ಸಂಪೂರ್ಣ ಮಾಹಿತಿ ಎಐ ತಂತ್ರಜ್ಞಾನದಿಂದ ರೈತರಿಗೆ ಸಿಗಲಿದೆ. ಈ ನಿಟ್ಟಿನಲ್ಲಿ ಎಐ ತಂತ್ರಜ್ಞಾನದ ಮೂಲಕ ಯುವ ರೈತರನ್ನು ಕೃಷಿಯತ್ತ ಸೆಳೆಯಲು ನಿರ್ಧರಿಸಲಾಗಿದೆ.

## ಸ್ಮಾರ್ಟ್ ಆ್ಯಪ್ ಟ್ರ್ಯಾಕ್ಟರ್

ಅಗ್ರಿಕಲ್ಚರ್ ಆಟೋಮಿಷನ್ ಲ್ಯಾಬೊರೆಟರಿ ವಿಶೇಷವಾಗಿ ಸ್ಮಾರ್ಟ್ ಉಳುಮೆ ಕುರಿತು ತರಬೇತಿ ನೀಡಲಿದೆ. ಕೃತಕ ಬುದ್ಧಿಮತ್ತೆಯಿಂದ ಕಾರ್ಯಾಚರಿಸುವ ಸ್ಮಾರ್ಟ್ ಆ್ಯಪ್ ಅನ್ನು ಟ್ರ್ಯಾಕ್ಟರ್‌ನೊಂದಿಗೆ ಸಂಯೋಜಿಸಲಾಗುತ್ತದೆ. ಇದು ಯಾವ ಬೆಳೆಗೆ ಎಷ್ಟು ಆಳದಲ್ಲಿ ಉಳುಮೆ ಮಾಡಬೇಕು, ಗೊಬ್ಬರದ ಪ್ರಮಾಣ, ಬೀಜ ಬಿತ್ತನೆ ಕುರಿತ ಸಂಪೂರ್ಣ ವೈಜ್ಞಾನಿಕ ಮಾಹಿತಿಯ ಆಧಾರದಲ್ಲಿ ಕೆಲಸ ನಿರ್ವಹಿಸಲಿದೆ. ಆ್ಯಪ್ ಹಾಗೂ ಟ್ರ್ಯಾಕ್ಟರ್ ಚಾಲನೆಗೆ ಒಬ್ಬ ವ್ಯಕ್ತಿ ಮಾತ್ರವೇ ಬೇಕಾಗುತ್ತದೆ. ಇದರಿಂದ ಕಡಿಮೆ ಖರ್ಚಿನಲ್ಲಿ ಅತ್ಯಂತ ಶೀಘ್ರವಾಗಿ ಉಳುಮೆ, ಬಿತ್ತನೆ ಹಾಗೂ ಗೊಬ್ಬರ ಹೊಲಕ್ಕೆ ಹಾಕಬಹುದಾಗಿದೆ. ಈ ಕುರಿತು ರೈತರು ಹಾಗೂ ಕೃಷಿ ವಿದ್ಯಾರ್ಥಿಗಳಿಗೆ ಪ್ರಯೋಗಾಲಯದಲ್ಲಿ ತರಬೇತಿ ನೀಡಲಾಗುತ್ತದೆ.

ಎಲ್ಲಾ ಕ್ಷೇತ್ರಗಳಲ್ಲಿ ಡಿಜಿಟಲ್ ಕ್ರಾಂತಿ ಆಗುತ್ತಿದೆ. ಅದೇ ರೀತಿ ಕೃಷಿಯಲ್ಲೂ ಹೊಸ ಆವಿಷ್ಕಾರ ಹುಟ್ಟುಹಾಕಲು ಎಐ ತಂತ್ರಜ್ಞಾನ ಆಧಾರದಲ್ಲಿ ಸುಧಾರಿತ ಕೃಷಿ ಯಂತ್ರೋಪಕರಣಗಳನ್ನು ಅಭಿವೃದ್ಧಿಪಡಿಸಲಾಗಿದೆ. ಇವುಗಳನ್ನು ಮೇಳದಲ್ಲಿ ಪ್ರದರ್ಶಿಸಲಾಗುವುದು. ರೈತರು ಲಾಭದಾಯಕ ಹಾಗೂ ವೈಜ್ಞಾನಿಕ ಕೃಷಿಗೆ ಒತ್ತು ನೀಡಲು ಇದು ಸಹಕಾರಿಯಾಗಿದೆ.

-**ಡಾ.ಎಸ್.ವಿ. ಸುರೇಶ್** ಕುಲಪತಿ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯ

The Hindu
Pg.04

# It was a day to remember for these visitors as UAS-B showcases upcoming Krishi Mela

The Hindu Bureau
BENGALURU



Children with disabilities during a showcase of the upcoming Krishi Mela, in Bengaluru on Sunday. K. MURALI KUMAR

It was an emotional moment for children with physical disabilities from different special schools in and around Bengaluru on Sunday, as the University of Agricultural Sciences-Bengaluru organised a showcase of the upcoming Krishi Mela on its GKVK campus.

The idea was conceived mainly to allow these children to get a feel of the popular farm event without any disturbance as there will be a huge crowd when the mela begins.

The event saw 230 children in the age group of 8 to 18 getting a first-hand feel of live demonstration plots, animal husbandry, and farm museum, among others.

"It was really an emotional moment for the students and their parents/mentors as well as us," UAS-B vice-chancellor S.V. Suresha told *The Hindu*. Though several of them were in wheelchairs, their enthusiasm knew no bounds as they went around with the help of student volunteers and faculty of the UAS-B.

The "special visitors" to the university were particularly thrilled to see a large plot with sunflowers in full bloom.

Sign language was used by experts from these schools to explain the concepts of farming.

Explaining the larger idea behind the event, Dr. Suresha said the university was keen to create awareness in society about the need to bring person with disabilities into the mainstream, particularly the farm sector.

*He said the university would examine the possibility of providing vocational training in grafting, grading of produce, sorting and seedling work for such people. This event would now become a permanent fixture ahead of the Krishi Mela.*

ಬೆಂಬಲ ಬೆಲೆಯಡಿ ಖರೀದಿ | ಒಂಬತ್ತು ಜಿಲ್ಲೆಗಳಲ್ಲಿ ಕೇಂದ್ರ ಗುರುತು

# ಹತ್ತಿ ಬೆಳೆಗಾರರ ನೆರವಿಗೆ ಕೇಂದ್ರ ಸರ್ಕಾರ

**ಬೆಂಗಳೂರು:** ಹತ್ತಿ ಬೆಳೆ ಕೈಸೇರುವ ಹೊತ್ತಲ್ಲೇ ಮುಕ್ತ ಮಾರುಕಟ್ಟೆಯಲ್ಲಿ ಬೆಲೆ ಕುಸಿತದಿಂದ ಚಿಂತಿತರಾಗಿದ್ದ ರಾಜ್ಯದ ರೈತರ ನೆರವಿಗೆ ಕೇಂದ್ರ ಸರ್ಕಾರ ಧಾವಿಸಿ, ಭಾರತೀಯ ಹತ್ತಿ ನಿಗಮ (ಸಿಸಿಐ)ಕ್ಕೆ ಬೆಂಬಲ ಬೆಲೆ ಯೋಜನೆಯಡಿ ಹತ್ತಿ ಖರೀದಿಗೆ ಸೂಚಿಸಿದೆ.

ಪ್ರಸಕ್ತ ಹಂಗಾಮಿಗೆ ಹತ್ತಿ ಮಧ್ಯಮ ಎಳೆ (24.5 ರಿಂದ 25.5 ಮಿಲಿ ಮೀಟರ್)ಗೆ ಪ್ರತಿ ಕ್ವಿಂಟಾಲ್‌ಗೆ 7,121 ರೂ. ಉದ್ದ ಎಳೆ (29.5 ರಿಂದ 30.5 ಮಿ.ಮೀ.) 7,521 ರೂ. ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಿದ್ದು, ನ್ಯಾಯೋಚಿತ ಸರಾಸರಿ ಗುಣಮಟ್ಟದ ಪ್ರಕಾರ ಷರತ್ತುಗಳನ್ನು ಅನ್ವಯಿಸಿದೆ. ಕೇಂದ್ರ ಜವಳಿ ಸಚಿವ ಗಿರಿರಾಜ್ ಸಿಂಗ್ ಸೂಚನೆ ಬರುತ್ತಿದ್ದಂತೆಯೇ ಸಿಸಿಐ ಹುಬ್ಬಳ್ಳಿ ಪ್ರಾದೇಶಿಕ ಕಚೇರಿ ಉಪ ವ್ಯವಸ್ಥಾಪಕರು ಕಾರ್ಯಪ್ರವೃತ್ತರಾಗಿ, ಖರೀದಿ ಕೇಂದ್ರಗಳ ವ್ಯವಸ್ಥೆ ಮಾಡುವಂತೆ ರಾಜ್ಯ ಕೃಷಿ ಮಾರಾಟ ಇಲಾಖೆಗೆ ಪತ್ರ ಬರೆದು ಕೋರಿದ್ದಾರೆ.

**ಮಹತ್ವಕಾಂಕ್ಷೆ ಜಿಲ್ಲೆಗಳ ವ್ಯಸನ:** ಕೇಂದ್ರ ಸರ್ಕಾರದ 'ಮಹತ್ವಾಕಾಂಕ್ಷಿ ಜಿಲ್ಲೆಗಳ' ಪಟ್ಟಿಯಲ್ಲಿರುವ ರಾಯಚೂರು, ಯಾದಗಿರಿ ಸೇರಿ ಹತ್ತಿ ಬೆಳೆಯುವ ಜಿಲ್ಲೆಗಳ ಮುಕ್ತ ಮಾರುಕಟ್ಟೆಯಲ್ಲಿ ಕ್ವಿಂಟಾಲ್ ದರ 6,500 ರೂ.ಗೆ ಕುಸಿದಿದ್ದು ಅನ್ನದಾತರ ವ್ಯಸನಕ್ಕೆ ಕಾರಣವಾಗಿತ್ತು. ಭಾರತೀಯ ಹತ್ತಿ ನಿಗಮವೇ ಬೆಂಬಲ ಬೆಲೆ ಯೋಜನೆಯಡಿ ಖರೀದಿಗೆ ಇಳಿದದ್ದು ರೈತರು ನೆಮ್ಮದಿಯಿಂದ ನಿಟ್ಟುಸಿರು ಬಿಡುವಂತೆ ಮಾಡಿದೆ.



ರಾಜ್ಯದ ಹಲವೆಡೆ ಅತಿವೃಷ್ಟಿಯಿಂದ ಸಾಕಷ್ಟು ಬೆಳೆ ಹಾನಿಯಾಗಿದ್ದು, ರೈತರಿಗೆ ಪರಿಹಾರ ನೀಡುತ್ತೇವೆ ಎಂದು ಸರ್ಕಾರ ಹೇಳುತ್ತಿದೆ. ಆದರೆ, ಇನ್ನೂ ನೀಡಿಲ್ಲ. ಈ ನಡುವೆ ಮೂರು ಕ್ಷೇತ್ರದ ಉಪಚುನಾವಣೆ ಬಂದಿರುವುದರಿಂದ 15 ದಿನ ಎಲ್ಲರೂ ಅದರಲ್ಲೇ ಮುಳುಗುತ್ತಾರೆ. ಚುನಾವಣೆ ಗೆಲ್ಲಲು ತೋರುತ್ತಿರುವ ಆಸಕ್ತಿಯನ್ನು ರಾಜ್ಯದ ಜನರ ಮೇಲೆ ತೋರಬೇಕು. ರೈತರ ಸಂಕಷ್ಟಗಳನ್ನು ಪರಿಹರಿಸಲು ಅವರಿಗೆ ಆತ್ಮಸ್ಥೈರ್ಯ ತುಂಬುವ ನಿಟ್ಟಿನಲ್ಲಿ ಸರ್ಕಾರ ಗಮನ ಹರಿಸಬೇಕು.

| ಎಚ್.ಡಿ.ಕುಮಾರಸ್ವಾಮಿ ಕೇಂದ್ರ ಸಚಿವ

### ಖರೀದಿ ಕೇಂದ್ರ ಗುರುತು

ಆಯಾ ಜಿಲ್ಲೆಯಲ್ಲಿರುವ ಹತ್ತಿ ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಗಿರಣಿ, ಉದ್ಯಮಗಳ ಆವರಣಗಳನ್ನೇ ಬೆಂಬಲ ಬೆಲೆಯಡಿ ಖರೀದಿ ಕೇಂದ್ರಗಳೆಂದು ಗುರುತಿಸಿ, ಕೃಷಿ ಮಾರಾಟ ಇಲಾಖೆ ನಿರ್ದೇಶಕರು ಆದೇಶಿಸಿದ್ದಾರೆ. ಯಾದಗಿರಿ ಜಿಲ್ಲೆ 15, ರಾಯಚೂರು- 14, ಕಲಬುರಗಿ- 12, ಧಾರವಾಡ ಮತ್ತು ಹಾವೇರಿ ತಲಾ 9, ಗದಗ ಹಾಗೂ ಬಳ್ಳಾರಿ ಜಿಲ್ಲೆ ತಲಾ 3, ಬೆಳಗಾವಿ ಮತ್ತು ಬಳ್ಳಾರಿ ಜಿಲ್ಲೆ ತಲಾ ಎರಡು ಹತ್ತಿ ಗಿರಣಿಗಳು ಹತ್ತಿ ಖರೀದಿ ಕೇಂದ್ರಗಳಾಗಿ ಪರಿವರ್ತನೆಯಾಗಿವೆ.

Vijayavani Pg.6c

# ಮಳೆ ಅಬ್ಬರದ ಬೆನ್ನಲ್ಲೇ ಬೆಲೆ ಏರಿಕೆ ಬಿಸಿ ಜೋರು

Vijaya Karnataka Pg.05

■ ಸ್ಟೀವನ್ ರೇಗೊ ಮಂಗಳೂರು
stevan.rego@timesofindia.com

ಉತ್ತಮ ಮುಂಗಾರು ಮಳೆಯಿಂದ ಕೃಷಿ ಚಟುವಟಿಕೆಗಳಿಗೆ ಉತ್ತೇಜನ ಸಿಕ್ಕಿದರೂ ಆಹಾರ ಧಾನ್ಯ, ಖಾದ್ಯ ತೈಲ ಮತ್ತು ತರಕಾರಿ ದರ ಏರಿಕೆ ಮುಂದುವರಿದಿದೆ. ಸೆಪ್ಟೆಂಬರ್‌ನಲ್ಲೇ ದರ ಏರಿಕೆಯ ಬಿಸಿ ತಟ್ಟಿದೆ ಎನ್ನುವುದಕ್ಕೆ ಸರಕಾರದ ದತ್ತಾಂಶಗಳು ವಿವರಣೆ ನೀಡುತ್ತಿದೆ.

ಆಹಾರ ಬೆಲೆಗಳ ಹೆಚ್ಚಳದಿಂದಾಗಿ ಭಾರತದ ಚಿಲ್ಲರೆ ಹಣದುಬ್ಬರ ಮಾರುಕಟ್ಟೆ ಸೆಪ್ಟೆಂಬರ್ ಒಂದರಲ್ಲಿಯೇ ಗರಿಷ್ಠ ಮಟ್ಟಕ್ಕೆ ಏರಿದೆ. ವಾರ್ಷಿಕ ಚಿಲ್ಲರೆ ಹಣದುಬ್ಬರ ಅಖಿಲ ಭಾರತ ಗ್ರಾಹಕ ಬೆಲೆ ಸೂಚ್ಯಂಕವನ್ನು ಆಧರಿಸಿ ಸೆಪ್ಟೆಂಬರ್‌ನಲ್ಲಿ ಶೇ.5.49ಕ್ಕೆ ಇತ್ತು. ಆಗಸ್ಟ್‌ನಲ್ಲಿ ಇದು ಶೇ.3.65ರಷ್ಟು ಹೆಚ್ಚಾಗಿತ್ತು ಎಂದು ಅಂಕಿ-ಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ ದತ್ತಾಂಶವನ್ನು ಬಿಡುಗಡೆ ಮಾಡಿದೆ.

**ಖಾದ್ಯ ತೈಲ ಬೆಲೆಯಲ್ಲಿ ಹೆಚ್ಚಳ:** "ಹಣದುಬ್ಬರದ ಒತ್ತಡ ಹಬ್ಬದ ಋತುವಿನ ಮೇಲೆ ಪರಿಣಾಮ ಬೀರುತ್ತದೆ. ಇದು ಕುಟುಂಬದ ಬಜೆಟ್ ಏರಿಕೆ ಮಾಡುತ್ತದೆ. ಹಬ್ಬದ ಋತುವಿನ ನಂತರ ಮದುವೆ ಋತು ಆರಂಭವಾಗಿ ಖಾದ್ಯ ತೈಲ ಮತ್ತು ಆಹಾರ ಧಾನ್ಯಗಳ ಹೆಚ್ಚಿನ ಬೆಲೆಗಳಿಂದ ಕುಟುಂಬದ ವೆಚ್ಚವನ್ನು ಹೆಚ್ಚಿಸುತ್ತದೆ," ಎನ್ನುತ್ತಾರೆ ಮಂಗಳೂರಿನ ವ್ಯಾಪಾರಿ ರಮೇಶ್ ಯಾದವ್.

ಮೆಕ್ಕೆಜೋಳ, ಭತ್ತ ಮತ್ತು ಕಬ್ಬಿನಂತಹ ಪ್ರಮುಖ ಬೆಳೆಗಳನ್ನು ಎಥೆನಾಲ್ ಉತ್ಪಾದನೆಗೆ ತಿರುಗಿಸುವುದು ಬೆಲೆ ಏರಿಕೆಯ ಕಾರಣದಲ್ಲಿ ಒಂದಾಗಿದೆ. ವಿಶೇಷವಾಗಿ ಕುಕ್ಕುಟೋದ್ಯಮದಲ್ಲಿ ಕೂಡ ಇದರ ಪ್ರಭಾವ ಈ ವರ್ಷದಲ್ಲಿ ಕಾಣಿಸಿಕೊಂಡಿದೆ. ಇದರ ಪರಿಣಾಮ ಉದ್ಯಮ ಮೊದಲಿನ ರೀತಿಯಲ್ಲಿ ಸಾಗುತ್ತಿಲ್ಲ ಎನ್ನುತ್ತಾರೆ ಕುಕ್ಕುಟೋದ್ಯಮಿ ಪ್ರಕಾಶ್ ಶೆಟ್ಟಿ.

**ಮುಂಗಾರು ಮಳೆಯಲ್ಲಿ ಮಾರುಕಟ್ಟೆ ಲೆಕ್ಕಾಚಾರ:** ಮುಂಗಾರು ಮಳೆಯಿಂದಾಗಿ ದರ ಏರಿಕೆಯ ಟ್ರೆಂಡ್ ಕಾಣಿಸಿಕೊಂಡಿರುವುದು ಇದೇ ಮೊದಲೇನೂ ಅಲ್ಲ. ಆದರೆ ಮಳೆ ಹೆಚ್ಚಾದಂತೆ ಬೆಳೆಗಳ ನಷ್ಟ ವಿಪರೀತವಾಗಿರುತ್ತದೆ. ಟೊಮೆಟೊ, ಈರುಳ್ಳಿಯಂತಹ ವಸ್ತುಗಳಿಗೆ ಹೆಚ್ಚು ಮಳೆ ಬಂದಾಗ ಕೊಳೆತು ಹೋಗುವ ಸಾಧ್ಯತೆ ಹೆಚ್ಚು. ಈ ಸಮಯದಲ್ಲಿ ಬೇಡಿಕೆ ಹೆಚ್ಚಿದಂತೆ ಪೂರೈಕೆ ಕಡಿಮೆಯಾದಾಗ ಬೆಲೆ ಏರಿಕೆ ಸರ್ವೇಸಾಮಾನ್ಯ. ಇದೇ ರೀತಿ ಹಿಂಗಾರಿನ ಅವಧಿಯಲ್ಲೂ ಇಂತಹ ಬೆಲೆ ಏರಿಕೆಯಾಟ ಕಾಣಿಸಿಕೊಳ್ಳುತ್ತದೆ. ಆದರೆ ಹಿಂಗಾರು ಅವಧಿಗೆ ಹೋಲಿಸಿದರೆ ಮುಂಗಾರು ಸಮಯದ ಆಹಾರ ಉತ್ಪನ್ನಗಳ ದರದಲ್ಲಿ ಏರಿಕೆಯ ಪ್ರಮಾಣ ಹೆಚ್ಚು ಎನ್ನುವುದು ಮಾರುಕಟ್ಟೆ ತಜ್ಞರ ಅಭಿಪ್ರಾಯ.



### ಆಹಾರ ವಸ್ತುಗಳ ದರ ಏರಿಕೆ

(ಆ.26ರಿಂದ ಸೆ. 26 ಕೆ.ಜಿ.ಗೆ)

| | |
|---|---|
| ಅಕ್ಕಿ | 3 |
| ಗೋಧಿ | 8 |
| ಕಡಲೆಬೇಳೆ | 9 |
| ಗೋಧಿ ಹಿಟ್ಟು | 12 |
| ಸೋಯಾಬೀನ್ ಎಣ್ಣೆ | 18 |
| ಸನ್‌ಫ್ಲವರ್ ಎಣ್ಣೆ | 20 |
| ಸಾಸಿವೆ ಎಣ್ಣೆ | 22 |
| ಈರುಳ್ಳಿ | 30 |
| ಟೊಮೆಟೊ | 45 |

Vijayavani Pg.4c

## ವಿ ರೈತ ಮಿತ್ರ

■ಬಾಳೆಯಲ್ಲಿ ಗೊನೆಯ ತೂಕ ಹೆಚ್ಚಿಸಲು ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ತಿಳಿಸಿ

| ರೇವಂತ್ ಶಿವಮೊಗ್ಗ

ಬಾಳೆ ನಮ್ಮ ರಾಜ್ಯದ ಪ್ರಮುಖವಾದ ಹಣ್ಣಿನ ಬೆಳೆ ಹಾಗೂ ಎಲ್ಲ ಕಾಲದಲ್ಲೂ ಕಡಿಮೆ ಬೆಲೆಗೆ ಸಿಗುವಂತಹ ಹಣ್ಣು. ಈ ಬೆಳೆಯಲ್ಲಿ ಹೆಚ್ಚಾಗಿ ನಾಟಿ ಮಾಡಲು ಬಳಸುವ ತಳಿಗಳೆಂದರೆ ಗ್ರ್ಯಾಂಡ್ ನೈನ್ (ಜಿ-9), ರಸಬಾಳೆ/ರಸತಾಳೆ, ಏಲಕ್ಕಿ ಬಾಳೆ, ಕೆಂಪು ಬಾಳೆ/ಕಮಲಾಪುರ ಬಾಳೆ, ನೇಂದ್ರನ್, ಮಧುರಂಗ ಇತ್ಯಾದಿ. ಗೊನೆಯ ಗುಣಮಟ್ಟ ಹೆಚ್ಚಿಸಿ ಆಕರ್ಷಕವಾದ ಹಣ್ಣುಗಳನ್ನು ಪಡೆದು ಇಳುವರಿ ಹೆಚ್ಚಿಸಬೇಕೆಂದರೆ, ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯವರು ಅಭಿವೃದ್ಧಿ ಪಡಿಸಿರುವ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದು ಸೂಕ್ತ. 1) ಬಾಳೆ ಸ್ಪೆಷಲ್ ಸಿಂಪರಣೆ: ಈ ಲಘು ಪೋಷಕಾಂಶಗಳ ಮಿಶ್ರಣವನ್ನು 5 ಬಾರಿ ಸಿಂಪರಿಸಬೇಕು. ಪ್ರತಿ 1.0 ಲೀಟರ್ ನೀರಿಗೆ 5.0 ಗ್ರಾಂ ಅಂದರೆ 200 ಲೀಟರ್ ನೀರಿಗೆ 1.0 ಕಿ.ಗ್ರಾಂ. ನಷ್ಟು ಸೇರಿಸಿ ಅದಕ್ಕೆ 4-5 ನಿಂಬೆ ಹಣ್ಣಿನ ರಸ ಮತ್ತು 3-4 ಪ್ಯಾಕೆಟ್ ಶಾಂಪೂವನ್ನು ಸೇರಿಸಿ ಚೆನ್ನಾಗಿ ಬೆರೆಸಿ ನಾಟಿ ಮಾಡಿದ 5, 6, 8 ಮತ್ತು 9 ತಿಂಗಳಲ್ಲಿ ಸಿಂಪರಣೆ ಮಾಡಬೇಕು. 2) ಗೊನೆಯ ತುದಿಗೆ ಪೋಷಕಾಂಶಗಳನ್ನು ಉಣಿಸುವುದು: ಗೊನೆಗಳು ಪೂರ್ಣ ಅಭಿವೃದ್ಧಿ ಹೊಂದಿದ ಮೇಲೆ ಗೊನೆ ತುದಿಯಲ್ಲಿರುವ ಗಂಡು ಹೂವನ್ನು ಕತ್ತರಿಸಿ, ಕತ್ತರಿಸಿದ ತುದಿಯ ಭಾಗಕ್ಕೆ ಒಂದು ಪ್ಲಾಸ್ಟಿಕ್ ಚೀಲದಲ್ಲಿ 100 ಮಿ.ಲೀ. ನೀರನ್ನು ತೆಗೆದುಕೊಂಡು ಇದಕ್ಕೆ 200 ಗ್ರಾಂ ಸಗಣಿ + 7.5 ಗ್ರಾಂ ಯೂರಿಯ + 7.5 ಗ್ರಾಂ ಸಲ್ಫೇಟ್ ಆಫ್ ಪೊಟ್ಯಾಷ್ ಬೆರೆಸಿ ಗೊನೆಯ ತುದಿಗಳಿಗೆ ಕಟ್ಟುವುದು.

| ಡಾ. ಎಂ. ಶಾಲಿನಿ ತೋಟಗಾರಿಕೆ ತಜ್ಞರು

# AN UNDERRATED FRUIT FROM THE CITRUS FAMILY

RENUKA NARAYANAN

FAITHLINE

WE are used to valorising the mango as our 'national fruit' and rightly so, because of its all-India profile and many delicious varieties. People even fight about which ones are better. But this week, as winter begins to nip the North and its seasonal bounty starts showing up, I realise anew that we have another fruit that is surely God's bounty to our land—the orange. Oranges are associated the world over with prosperity and happiness. The Roman goddess Juno apparently brought oranges as her dowry when she married the god Jupiter. And we all know that the colour orange is holy in Hinduism, Buddhism and Sikhism.

I discovered that in the South, the orange season lasts from October through March. In the north, it's from December to February, while Central and Western India's orange season is from November through January and again, from March through May.


The mandarin orange is apparently the most grown among citrus fruits in India. It occupies over 40 percent of the total area under citrus cultivation here. The most important commercial citrus species in India are the mandarin (Citrus reticulata), sweet orange (Citrus sinensis) and acid lime (Citrus aurantifolia) sharing 41, 23 and 23 percent respectively.

It seems oranges are grown mostly in Maharashtra, Madhya Pradesh, Tamil Nadu, Assam, Orissa, West Bengal, Rajasthan, Nagaland, Mizoram and Arunachal Pradesh. The Nagpur mandarin is rated as one of the best in the world and if you want to grow some, you could probably try sourcing it from the Central Citrus Research Institute, Amravati Road, Nagpur.

Besides tasting great, oranges are rich in Vitamin C, A, B, and phosphorus. We can eat them fresh or as juice, jam and squash. Or in Cointreau, the orange liqueur, with which you can also make the dessert Crepes Suzette. I rate thick-cut orange marmalade as a great spread for hot, buttered toast.

As a young college student, I loved storming Pragati Maidan in Delhi for Peshawari almonds and strings of dried Afghani figs. Today, while those treats are freely found in shops and on apps, what I miss are the blood-red 'Malta' oranges from Gujranwala, now in Pakistan.

I've heard Malta oranges were first grown in Punjab in Sardar Hari Singh Nalwa's famous orchard. Hari Singh Nalwa (1791-1837) was one of India's legendary generals. He was the commander-in-chief of the Sikh Khalsa Fauj, the army of the Sikh Empire. He is known for his role in the conquests of Kasur, Sialkot, Attock, Multan, Kashmir, Peshawar and Jamrud. His father, Gurdial Singh, died when he was just seven in 1798 and his maternal uncle raised him.



WIKIMEDIA COMMONS

> Eating a Malta orange is a spiritual experience, like standing under an amaltas tree in full bloom. When you eat it, the glory of creation bursts on your brain in '*sphota*' like Sanskrit writer Bhartrihari's 'explosion of utterance', an instantaneous flash of recognition

Hari Singh earned the sobriquet 'Nalwa' after he reportedly killed a tiger at a young age. He was also called 'Bagh Maar' or tiger killer for that reason. His descendants are still very much around. That he grew oranges is a soft facet of his heroic personality as a warrior.

Maltas haven't come my way in Delhi since my teens, which were a while ago by dental if not mental reckoning; and I only ever got to eat them again in Sicily in my feckless 20s. What you find in boring plenty now on the orange front is kinu (Kinnow), which of course is easy to peel and eat but seems to have chased out other interesting kinds, like how pigeons have exiled sparrows from Delhi.

Why should we care a fig about Malta oranges, you say? Imagine you've had a dusty, tiring journey. You come home, wash up and there on a snow-white quarter plate with a spoon placed invitingly by it, sits half a chilled blood-red Malta orange. Just the sight of it is so beautiful that you have to look again. And when you eat it, the glory of creation bursts on your brain in '*sphota*' like Sanskrit writer Bhartrihari's 'explosion of utterance', an instantaneous flash of recognition, though he was talking about the aesthetics of language, not fruit. Bhartrihari (circa 570 CE to 651 CE) was a philosopher and grammarian who lived in ancient Ujjain. He asserted that *sphota* contains "an inner energy (*kratu*) that seeks to burst forth into expression."

If you get your hands on enough Malta oranges to both eat fresh and cook with, you might like 'Sauce Maltaise', a classic French sauce. It blends the zest and juice of one blood orange with two egg yolks, salt, pepper, lemon juice and melted unsalted butter. It's a fun upgrade for steamed or grilled broccoli and asparagus as well as sautéed potatoes. It's even used as a topping for pan-fried fish and a variation of hollandaise sauce in the classic Eggs Benedict.

These are quick Western recipes available online, and easily made in Indian kitchens; there's no need to source exotic ingredients except, of course, the Malta orange.

Plainly put, eating a Malta orange is a spiritual experience, like standing under an amaltas tree in full bloom. Emanuel Bonavia, MD, Brigade-Surgeon in the Indian Medical Service, spelt out how matters stood back in 1888 in his fascinating study, wordily but comprehensively titled '*The Cultivated Oranges and Lemons Etc of India and Ceylon with Researches into the Origin and the Derivation of their Names and Other Useful Information with an Atlas of Illustrations*'. He categorically stated, "The best of all is the blood orange of Gujranwala."

There are so many bright, modern farmers in our land. Dear people, are you going to be left pipped or won't you make this amazing ancient orange happen affordably at home? We'd so love you for it.

*(Views are personal)*

*(shebaba09@gmail.com)*

# Farmers have field day with e-SAP's quick solutions to issues cropping up

## UASR-designed app escalates complications to experts

MANJUNATH HEGDE BOMNALLI
HUBBALLI, DHNS

An IT solution for crop health management first designed and developed by University of Agricultural Sciences, Raichur (UASR) has offered more than 53,000 services to farmers in two months after the government recently launched it across the state.

Electronic Solution against Agricultural Pests (e-SAP), deployed on a pilot basis by UASR in Kalyana Karnataka region 12 years back, has seen its full-fledged launch by the agriculture department this kharif after R&D, content addition and scaling up.

The app-based mechanism aims at speedily and accurately identifying pests, diseases and nutritional disorders of different crops and recommending authentic solutions.

### Details entered

It is being used by field staff across the state since its launch in August. During field visits, users have to enter a photograph, details of farmers and the problematic part of the plant. The app identifies the problem and suggests solutions based on the package of practices as per integrated pest management and if needed recommends chemicals labelled by Central Insecticides Board & Registration Committee (CIBRC) in generic name. The app covers 44 crops.

e-SAP guides the staff visiting fields to accurately identify the problem and suggests cultural (water and waste management, harvesting, plant spacing, etc), physical or chemical solutions in real time.

Farmers also get a message of the recommendation on their phones. Confusing, complicated or new symptoms are escalated to experts through the app itself, to get solutions instantly.

Earlier, Manjunath Jangannavar, an ATMA (Agricultural Technology Management Agency) scheme staff attached to Raitha Samparka Kendra at Saunshi village in Dharwad district, used to contact higher officials or agriculture scientists for solution problems in the fields. "Now, the app accurately identifies varieties of diseases and suggests solutions after I enter details of the crop and the problem," he says.

YS PATIL
Commissioner, Agriculture Department

> As e-SAP offers real-time data of area, extent and intensity of pest attack along with history, it helps take quick decisions regarding management, precautions and planning, reducing unnecessary or excessive use of pesticides.

A total of 1,748 field staff - those appointed under ATMA scheme, Krishi Sanjeevini scheme and agriculture officers - have offered services through e-SAP to 36,897 farmers in two months. They had to pass a test and undergo training before getting access to this app. Maximum usage of e-SAP in these two months was in Raichur district with 6,356 services, followed by Belagavi with 4,430 services.



The app-based mechanism aims at speedy and accurate identification of pests, diseases and nutritional disorders of different crops and recommending authentic solutions.
DH FILE PHOTO

Mudakappa Harkuni, a farmer at Hosalli in Kundgol taluk in Dharwad district, said the disease for his cotton crop could be controlled with the solution offered by e-SAP.

"I used to visit pesticide shops earlier and they used to give some chemical based on what I explained. This time, an e-SAP user gave me correct information and I also got prescription through a message in Kannada on my phone," he added. Out of 53,555 services, e-SAP in two months gave on-the-spot suggestions using its inbuilt data in 97.62% cases, while 1,273 queries were escalated to experts at Krishi Vigyan Kendras (KVKs). More than 900 types of problems were handled in total.

According to UASR entomology professor and e-SAP principal investigator Prabhuraj A, entomologists, plant pathologists, soil scientists, agronomists and KVKs are empanelled for content development and expert support.

"The app works offline in the fields," he said, adding that 10 more crops would be added to the app soon.

Horticulture and sericulture departments will start using the system in a full-fledged manner shortly.

Agriculture department commissioner Y S Patil said, "As e-SAP offers real-time data of area, extent and intensity of pest attack along with history, it helps take quick decisions regarding management, precautions and planning, reducing unnecessary or excessive use of pesticides."

# As millers complain, expert panel set up to study poor yield of key paddy variety

JITENDRA CHOUBEY @ New Delhi

## 'HYBRID VARIETIES MARKETED'

PR-126, a key paddy variety, used to give **67%** of Out Turn Ratio (OTR) from paddy to rice



This year, Punjab's rice millers complain that it has given **4-5%** less OTR than usual

According to Union minister Pralhad Joshi, the prime reason of the reduced OTR is due to the rise in hybrid varieties that are marketed in the name of PR-126

Hybrid varieties have a significantly lower OTR than varieties like PR-126

**PR-126 HAS BEEN ADOPTED IN PUNJAB ON LARGE SCALE SINCE 2016**

THE Centre has constituted a committee of experts from the IIT-Kharagpur to review the paddy variety PR-126 after receiving complaints, especially from Punjab's rice millers, about relatively lesser rice yield, officials said.

The PR-126 variety, adopted in Punjab on a large scale since 2016, has been giving 67% of out turn ratio (OTR) from paddy to rice. However, this year Punjab's rice millers complained that PR-126 has been giving 4-5% less OTR. Rice millers claim that the paddy variety comes with an intrinsic defect of broken grains, resulting in lesser rice yield of around 5 kg per quintal.

Union Minister for Consumer Affairs and Food & Public Distribution Pralhad Joshi said, "There were no complaints related to PR-126 variety since its adoption in 2016. It is understood that complaints are now being made because of a rise in hybrid varieties that are marketed in the name of PR-126 in Punjab."

The Centre said a study was assigned to IIT-Kharagpur for reviewing the present OTR of the paddy variety. "Tests are being conducted in different rice-procuring states including Punjab," said Sanjeev Chopra, secretary of the department of food and public distribution.

Being a short-duration variety, PR-126 matures in just 125 days and requires less water. But millers say it is often ready in 110 days, resulting in a rice production ratio of 62 to 64 kg. Lesser rice yield is forcing mill owners to absorb the loss as the Centre demands the full quota of 67 kg per quintal of paddy.

Meanwhile, the government has denied any crisis of storage capacity of paddy or rice as procurement is delayed compared to previous year. In Punjab, a large number of farmers have lined up at procurement centres with their paddy. As on October 26, the government procured 54.5 lakh metric tonnes (LMT) of paddy against 61.5 LMT last year.

IndianExpress Pg.07